ಕರ್ನಾಟಕ ಸರ್ಕಾರ

ನಂ. Comp. 9/2003-04

ನೋಂದಣಿ ಮಹಾಪರಿವೀಕ್ಷಕರು
ಹಾಗೂ ಮುದ್ರಾಂಕಗಳ ಆಯುಕ್ತರ ಕಛೇರಿ,
7ನೇ ಮಹಡಿ, BWSSB ಕಟ್ಟಡ,
ಕಾವೇರಿ ಭವನ, ಬೆಂಗಳೂರು,
ದಿನಾಂಕ 23.08.2004.

ಗಣಕೀಕರಣ
ಸುತ್ತೋಲೆ - 9

ವಿಷಯ:- ಸ್ಕ್ಯಾನಿಂಗ್ ಫೀ ಹಾಗೂ ನಕಲು ಫೀಯನ್ನು ಲೆಕ್ಕಶೀರ್ಷಿಕೆ "0030-03-800-0-02" ಈ ಖಾತೆಗೆ ಜಮಾ ಮಾಡುವ ಕುರಿತು.

ಉಲ್ಲೇಖ:- 1. ಈ ಕಛೇರಿಯ ಗಣಕೀಕರಣ ಸುತ್ತೋಲೆ 1 ಸಂಖ್ಯೆ: Comp. 9/2003-04 ದಿನಾಂಕ 29.8.2003.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 482 ಮುನೋಮು 2003 (ಭಾ - 1), ಬೆಂಗಳೂರು, ದಿನಾಂಕ 11.8.2004

***

1. ಈ ಕಛೇರಿಯ ಗಣಕೀಕರಣ ಸುತ್ತೋಲೆ 1 ಸಂಖ್ಯೆ: Comp. 9/2003-04 ದಿನಾಂಕ 29.8.2003ರಲ್ಲಿ ಸಾರ್ವಜನಿಕರಿಂದ ವಸೂಲಿಯಾದ ಸ್ಕ್ಯಾನಿಂಗ್ ಫೀಯನ್ನು ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಹೆಸರಿನಲ್ಲಿರುವ ವೈಯಕ್ತಿಕ ಖಾತೆ [ಪಿ.ಡಿ. ಖಾತೆ] ಲೆಕ್ಕಶೀರ್ಷಿಕೆ " 8449-other Deposits-00-120-Miscellaneous Deposits-9-other Deposits-24-Inspector General of Registration" ಈ ಖಾತೆಗೆ ನಿತ್ಯವೂ ಜಮಾ ಮಾಡಲು ಆದೇಶಿಸಲಾಗಿದೆ.

2. ಉಲ್ಲೇಖ (2)ರಲ್ಲಿ ಹೇಳಿದ ಸರ್ಕಾರಿ ಆದೇಶದಂತೆ ದಿನಾಂಕ 31.8.2004 ರವರೆಗೆ ಮಾತ್ರ ಸಾರ್ವಜನಿಕರಿಂದ ವಸೂಲಿಯಾದ ಸ್ಕ್ಯಾನಿಂಗ್ ಫೀಯನ್ನು ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಹೆಸರಿನಲ್ಲಿರುವ ವೈಯಕ್ತಿಕ ಖಾತೆಗೆ ಮೇಲ್ಕಂಡ ಲೆಕ್ಕಶೀರ್ಷಿಕೆಗೆ ಜಮಾ ಮಾಡತಕ್ಕದ್ದು.

3. ದಿನಾಂಕ 1.9.2004 ರಿಂದ ಸಾರ್ವಜನಿಕರಿಂದ ವಸೂಲಿಯಾದ ಸ್ಕ್ಯಾನಿಂಗ್ ಫೀ ಹಾಗೂ ನಕಲು ಫೀ ಹಣವನ್ನು ನೋಂದಣಿ ಮಹಾಪರಿವೀಕ್ಷಕರ ವೈಯಕ್ತಿಕ ಖಾತೆ (ಪಿ.ಡಿ. ಖಾತೆಗೆ) ಜಮಾ ಮಾಡತಕ್ಕದ್ದಲ್ಲ.

4. ದಿನಾಂಕ 1.9.2004 ರಿಂದ ಉಲ್ಲೇಖ (2)ರಲ್ಲಿ ಹೇಳಿದ ಸರ್ಕಾರದ ಆದೇಶದಂತೆ (ಪ್ರತಿ ಲಗತ್ತಿದೆ), ಸ್ಕ್ಯಾನಿಂಗ್ ಫೀ ಪ್ರತಿ ಪುಟಕ್ಕೆ ರೂ.30/- ಹಾಗೂ ದಸ್ತಾವೇಜು ನಕಲುಗಳನ್ನು ಒದಗಿಸಲು ಪ್ರತಿ ಪುಟಕ್ಕೆ ರೂ.10/- ರಂತೆ ಸಾರ್ವಜನಿಕರಿಂದ ವಸೂಲಾದ ಹಣವನ್ನು ನಿತ್ಯವೂ

-2

ತಪ್ಪದೇ ಲೆಕ್ಕಶೀರ್ಷಿಕೆ "0030-03-800-0-02 fee for copies of registered documents" ಈ ಖಾತೆಗೆ ಜಮಾ ಮಾಡತಕ್ಕದ್ದು.

5. ಈ ಸರ್ಕಾರಿ ಆದೇಶದಂತೆ, ನಮೂನೆ (1) ರಲ್ಲಿ ಪ್ರತಿ ತಿಂಗಳು ಉಪನೋಂದಣಾಧಿಕಾರಿಗಳು ಮಾಹಿತಿಯನ್ನು ಖಜಾನೆ ಅಧಿಕಾರಿಗಳೊಂದಿಗೆ ಲೆಕ್ಕ ಹೊಂದಾಣಿಕೆ ಮಾಡಿಕೊಂಡು ಜಿಲ್ಲಾ ನೋಂದಣಾಧಿಕಾರಿಗಳಿಗೆ, ಜಿಲ್ಲಾ ನೋಂದಣಾಧಿಕಾರಿಗಳು ನಮೂನೆ (2)ರಲ್ಲಿ ಈ ಕಛೇರಿಗೆ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಕಳುಹಿಸಿ ಕೊಡತಕ್ಕದ್ದು. ಉಪನೋಂದಣಾಧಿಕಾರಿ ಕಛೇರಿಯಲ್ಲಿ ನಮೂನೆ (1)ರಲ್ಲಿ ವಿವರಿಸಿದ ನಮೂನೆಯಲ್ಲಿಯೇ ರಿಜಿಸ್ಟರ್ ಇಟ್ಟುಕೊಳ್ಳತಕ್ಕದ್ದು. ಜಿಲ್ಲಾ ನೋಂದಣಾಧಿಕಾರಿಗಳು ಕಛೇರಿಯ ತಪಾಸಣೆ ವೇಳೆಯಲ್ಲಿ ಇದನ್ನು ಪರಿಶೀಲಿಸತಕ್ಕದ್ದು.

(ಸಿ. ಕೃಷ್ಣಪ್ಪ)
ನೋಂದಣಿ ಮಹಾಪರಿವೀಕ್ಷಕರು
ಹಾಗೂ ಮುದ್ರಾಂಕಗಳ ಆಯುಕ್ತರು

ಪ್ರತಿಯನ್ನು

1. ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ನೋಂದಣಿ), ಬಹುಮಹಡಿ ಕಟ್ಟಡ, ಬೆಂಗಳೂರು.
2. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ.
4. ಜಿಲ್ಲಾ ಖಜಾನಾಧಿಕಾರಿಗಳು ಹಾಗೂ ಉಪ ಖಜಾನಾಧಿಕಾರಿಗಳಿಗೆ.
5. ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿಗಳಿಗೆ.

10.ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ.

11.ಗಾರ್ಡ್ ಫೈಲ್

12.ಕಛೇರಿ ಕಡತಕ್ಕೆ/ಹೆಚ್ಚಿನ ಪ್ರತಿಗಳು.